ಒಂದೆಡೆ ಬಿಸಿಲ ಧಗೆ ಹೆಚ್ಚುತ್ತಿದೆ. ಆದಕ್ಕೆ ಪೈಪೋಟಿ ನೀಡುವಂತೆ ಚುಟುಕು ಕ್ರಿಕೆಟ್ ಜ್ವರ ಆರಂಭವಾಗುತ್ತಿದೆ. ಮಾರ್ಚ್ 22ರಿಂದ ಮೇ 25ರ ತನಕ ಭಾರತದ ವಿವಿಧ ಕ್ರೀಡಾಂಗಣಗಳಲ್ಲಿ ‘ಇಂಡಿಯನ್ ಪ್ರೀಮಿಯರ್ ಲೀಗ್’ (ಐಪಿಎಲ್) ಟೂರ್ನಿಯ ಪಂದ್ಯಗಳು ನಡೆಯಲಿವೆ. ಚಾಂಪಿಯನ್ಸ್ ಟ್ರೋಫಿ ಪಂದ್ಯಾವಳಿಯಲ್ಲಿ ಭಾರತ ತಂಡ ಗೆಲುವು ಸಾಧಿಸಿರುವುದು ‘ಐಪಿಎಲ್’ ಪಂದ್ಯಗಳ ಕುರಿತ ನಿರೀಕ್ಷೆಗಳು ಹೆಚ್ಚಲು ಕಾರಣವಾಗಿವೆ. ಟೀಕೆ ಟಿಪ್ಪಣಿಗಳ ನಡುವೆಯೂ ಆವೃತ್ತಿಯಿಂದ ಆವೃತ್ತಿಗೆ ತನ್ನ ಆಕರ್ಷಣೆ ಹೆಚ್ಚಿಸಿಕೊಳ್ಳುತ್ತಲೇ ಇರುವ ‘ಮಿಲಿಯನ್ ಡಾಲರ್ ಬೇಬಿ’ ಐಪಿಎಲ್‌ಗೀಗ ಹದಿನೇಳು ತುಂಬಿ ಹದಿನೆಂಟು! ಇದು ಹುಚ್ಚು ಖೋಡಿ ವಯಸು!

■ ಪ್ರಮೋದ ಕುಲಕರ್ಣಿ

INDIAN PREMIER LEAGUE

